Sri ALUR HANUMANTHAPPA.—I think it is not necessary to hold it over.

Mr. SPEAKER.—Then why not the member put a separate Question and I will admit it immediately.

Sri R. M. DESAI.—I will do so.

———

Construction of a Pick-up at Linganapura

*Q.—620. Sri R. N. LAKSHMIPATHI [on behalf of SRI S. KARIAPPA (Kanakapura)].—

Will the Government be pleased to state:—

(*a*) whether it is a fact that the pick up which is being constructed across the halla at Linganapura, Kanakapura Taluk is not an important one;

(*b*) the estimated cost of the pick-up;

(*c*) whether it was fully investigated before taking it up;

(*d*) whether they would immediately depute an Engineer for inspection of the said pick-up and get a report as to the feasibility of the work?

*A.—Sri ALUR HANUMANTHAPPA (Deputy Minister for Minor Irrigation).—

(*a*) No.

(*b*) Rs. 29,900.

(*c*) Yes.

(*d*) Does not arise in view of reply to clause (*c*) of the question.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಸ್ವಾಮಿ, ಈ ಕನಕಪುರ ತಾಲ್ಲೂಕು ಲಿಂಗನಪುರದ ಬಳಿಯು ರುವ ಹಳ್ಳಕ್ಕೆ ಅಡ್ಡಲಾಗಿ ನಿರ್ಮಿಸಲಾಗುತ್ತಿರುವ ಪಿಕ್ ಅಪ್ ಅನ್ನು ಹಾಕುವುದರಿಂದ ಎಷ್ಟು ಎಕರೆ ಅಚ್‌ಕಟ್ ನೀರಾವರಿ ಆಗಬಹುದೆಂದು ಪರೀಕ್ಷಣೆ ಮಾಡಿದ್ದೀರಿ?

†ಶ್ರೀ ಆಲೂರು ಹನುಮಂತಪ್ಪ.—ಅದರಿಂದ 60 ಎಕರೆ ಅಚ್ಚುಕಟ್ಟು ನೀರಾವರಿ ಆಗುತ್ತದೆ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಆ ಪಿಕ್-ಅಪ್‌ನಲ್ಲಿ ಏಪ್ರಿಲ್ ತಿಂಗಳಿನಲ್ಲಿ ಮಾತ್ರ ನೀರು ಹರಿಯುತ್ತಿರುತ್ತದೆ. ಬಾಕಿ ಕಾಲದಲ್ಲಿ ನೀರು ಮುಗಿದುಹೋಗುತ್ತದೆ. ಎಲ್ಲೋ ಸ್ವಲ್ಪ ನೀರು ಹರಿಯುತ್ತಾ ಅದರ ಜೊತೆಯಲ್ಲಿ ಮರಳು ಹಾದುಬರುತ್ತದೆ. ಆದ್ದರಿಂದ ಆ ಪಿಕಪ್ಪಿನ ಉಪಯೋಗ ಕಡಿಮೆಯಾಗಿದೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಆಲೂರು ಹನುಮಂತಪ್ಪ.—ನೀರಿನ ಜೊತೆಯಲ್ಲಿ ಎಲ್ಲೋ ಸ್ವಲ್ಪ ಮರಳು ಬರಬಹುದು. ಆದರೆ ಅಲ್ಲಿ ನೀರು ಬರುವುದಕ್ಕೆ ಅವಕಾಶವಿದೆ. ಅದಕ್ಕೋಸ್ಕರ ಆ ಪಿಕ್-ಅಪ್ ಅನ್ನು ನಿರ್ಮಾಣ ಮಾಡಿದವರು ನಿರ್ಮಿಸುತ್ತಿದ್ದಾರೆ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಅಲ್ಲಿ ನೀರು ಸರಿಯಾಗಿ ಬರುವುದಿಲ್ಲ. ನಮ್ಮನೆ ಅದರಲ್ಲಿ ಮರಳು ಬಂದು ತುಂಬಿಕೊಳ್ಳುತ್ತದೆ. ಹೀಗಿರುವುದರಿಂದ ಆ ಪಿಕ್-ಅಪ್ ಅನ್ನು ಕಟ್ಟುವುದರಿಂದ ಪ್ರಯೋಜನವೇನು?

ಶ್ರೀ ಆಲೂರು ಹನುಮಂತಪ್ಪ.—ಅದನ್ನು ಸರ್ವೆ ಮಾಡಿರತಕ್ಕ ರಿಪೋರ್ಟ್ ನನ್ನ ಹತ್ತಿರ ಇದೆ. ಅಲ್ಲಿ ಖರನಿಯರ್ ವಾಚರ್ ಸೋರ್ಸ್ ಇದೆ. ಆ ಹಳ್ಳಗಳಲ್ಲಿ ನೀರು ಇದೆ ಎಂದು ರಿಪೋರ್ಟ್ ಮಾಡಿದ್ದಾರೆ. ಈಗ ಅದು ನನ್ನ ಹತ್ತಿರ ಇದೆ.

ಶ್ರೀ ಜಿ. ರಾಮೇಗೌಡ.—ಸ್ವಾಮಿ, ಸಾಮಾನ್ಯವಾಗಿ ಒಂದು ಬತ್ತದ ಬೆಳೆ ಬರಬೇಕಾಗಿದ್ದರೆ 5-6 ತಿಂಗಳು ನೀರುಬೇಕಾಗುತ್ತದೆ. ಹೀಗಿರುವಾಗ ಅಲ್ಲಿ ಎರಡು ಮೂರು ತಿಂಗಳೂ ಕೂಡ ನೀರು ಇಲ್ಲದೆ ಇರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಆಲೂರು ಹನುಮಂತಪ್ಪ.—ಸೀಪೇಜ್ ವಾಟರ್, ಸೋರ್ಪೆಸ್ ಇರುವಕಡೆ ಸಾಮಾನ್ಯವಾಗಿ ಒಂದು ವರ್ಷದಲ್ಲಿ ಎರಡು ಮೂರು ತಿಂಗಳು ಮಾತ್ರ ನೀರು ಇರುವುದಿಲ್ಲ. ಬಾಕಿ ದಿನಗಳಲ್ಲಿ ಅಂಥಾ ಕಡೆ ನೀರು ಇರುತ್ತದೆ. ಈ ಪರ್ಟಿಕ್ಯುಲರ್ ಕೇಸಿನಲ್ಲಿ ಹೇಗಿದೆಯೋ ಅದು ನನಗೆ ಗೊತ್ತಿಲ್ಲ. ಇಂಥಾ ಪಿಕ್-ಅಪ್‌ಗಳನ್ನು ಕೆಲವು ಕಡೆ ಕಟ್ಟಿದ್ದೇವೆ. ಅಂಥಾ ಕಡೆ ಸಾಮಾನ್ಯವಾಗಿ ಮಳೆ ಇಲ್ಲದೆ ಇರುವಾಗ ಮಾತ್ರ ನೀರು ಇಲ್ಲದೆ ಇರತಕ್ಕ ನಂದರ್ಭ ಬರಬಹುದು.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಈ ಪರ್ಟಿಕ್ಯುಲರ್ ಕೇಸಿನಲ್ಲಿ ಅಲ್ಲಿ ಎಷ್ಟು ನೀರು ಇದೆ ಎಂಬುದನ್ನು ಪರೀಕ್ಷೆಮಾಡಿದ್ದೀರಾ ?

ಶ್ರೀ ಆಲೂರು ಹನುಮಂತಪ್ಪ.—ಅಲ್ಲಿ ಎರಡು ಕ್ಯೂಸೆಕ್ಸ್ ನೀರು ಇದೆ.

ಶ್ರೀ ಎಚ್. ಆರ್. ಕೇಶವ ಮೂರ್ತಿ.—ಈ ಪಿಕ್-ಅಪ್‌ನಲ್ಲಿ ಮರಳು ಬಂದು ತುಂಬಿಕೊಳ್ಳುತ್ತದೆ. ಅದನ್ನು ತೆಗೆಸಬೇಕಾದರೆ ಸರ್ಕಾರಕ್ಕೆ ಡಬರ್ ಖರ್ಚು ಬರುವುದಿಲ್ಲವೇ ! ಮತ್ತು ಆ ರೀತಿ ಪಿಕ್-ಅಪ್ ಗಳಲ್ಲಿ ಮರಳು ಮತ್ತು ಸಿರ್ಟ್ ಬಂದು ತುಂಬಿಕೊಳ್ಳದಂತೆ ಏನಾದರೂ ಒಂದು ವ್ಯವಸ್ಥೆಯನ್ನು ಏತಕ್ಕೆ ಮಾಡಬಾರದು ?

ಶ್ರೀ ಆಲೂರು ಹನುಮಂತಪ್ಪ.—ಈ ಪಿಕ್-ಅಪ್ ಹಾಕಿರುವ ಕಡೆ ಪೆರೆನಿಯರ್ ವಾಟರ್ ಸೋರ್ಪ್ಸ್ ಇದೆ. ಅಂಥಾ ಪಿಕ್-ಅಪ್‌ಗಳಲ್ಲಿ ಮಳೆ ಬಂದರೆ ಮರಳು ಬಂದು ಸೇರುತ್ತದೆ ಎಂದು ಸಾಮಾನ್ಯವಾಗಿ ಫ್ಲಡ್‌ಗೇಟ್ ಇಟ್ಟಿರುತ್ತಾರೆ. ಅದರಲ್ಲಿ ಮರಳು ಆಚೆಗೆ ಹೊರಟು ಹೋಗುತ್ತದೆ. ಆದ್ದರಿಂದ ಅಂಥಾ ಕಷ್ಟವೇನೂ ಬರುವುದಿಲ್ಲ.

ಶ್ರೀ ಬಿ. ಬೈರಪ್ಪಾಜಿ.—ಈ ಪಿಕ್-ಅಪ್‌ಅನ್ನು ಕಟ್ಟುವದರಲ್ಲಿ ರಾಜಕೀಯ ಪ್ರಭಾವ ಏನಾದರೂ ನಡೆದಿದೆಯೇ ? ಆ ಪಿಕ್-ಅಪ್ಪಿನ ಅವಶ್ಯಕತೆ ಇಲ್ಲ ಎಂದು ಅಲ್ಲಿ ಕೆಲವು ಜನಗಳು ಹೇಳುತ್ತಿದ್ದಾರೆ. ಆದ್ದರಿಂದ ಅದನ್ನು ಮಾನ್ಯ ಮಂತ್ರಿಗಳು ಅಜಮಾಯಿಷಿ ಮಾಡಿ ಅಲ್ಲಿನ ಜನಗಳು ಆ ಪಿಕ್-ಅಪ್‌ಅನ್ನು ಕಟ್ಟತಕ್ಕ ಅವಶ್ಯಕತೆ ಇಲ್ಲ ಎಂದು ಹೇಳಿದರೆ ಅದರ ಮುಂದಿನ ಕಾರ್ಯವನ್ನು ನಿಲ್ಲಿಸುತ್ತೀರಾ ?

ಶ್ರೀ ಆಲೂರು ಹನುಮಂತಪ್ಪ.—ಸರ್ಕಾರದ ಹಣವನ್ನು ಖರ್ಚು ಮಾಡುವಾಗ ಅದರ ಸಾಧ್ಯಾಸಾಧ್ಯತೆಯನ್ನು ಸಂಪೂರ್ಣವಾಗಿ ಪರಿಶೀಲನೆ ಮಾಡಿ ಅದನ್ನು ಮಾಡತಕ್ಕದ್ದು ನೂಕ್ತ ಐದೆ ಎಂದು ಮಾಡಿದೆ. ಆದರೆ ಯಾವ ರಾಜಕೀಯ ಪ್ರಭಾವದಿಂದಾಗಲೀ ಅದನ್ನು ಬೇಡ ಎಂದರೆ ನಿಲ್ಲಿಸುವುದಾಗಲೀ, ಅಥವಾ ಅದು ಬೇಕು ಎಂದರೆ ಕಟ್ಟುವದಾಗಲೀ ಅದು ಸರ್ಕಾರದ ವತಿಯಿಂದ ಆಗುವುದಿಲ್ಲ ಎಂದು ನಾನು ಭರವಸೆಯನ್ನು ಕೊಡುತ್ತೇನೆ.

———

Industrial Disputes.

*Q.—378. Sri S. RAJAGOPAL (K. G. F.).—

Will the Government be pleased to state :—

whether they have decided not to refer the Industrial Disputes raised under the Industrial Disputes Act, to adjudication, if such disputes are sought to be raised by Trade Unions not recongnised by the employer ?

A—Sri D. DEVARAJ URS (Minister for Labour, Housing and Transport).—

No.

Sri S. RAJAGOPAL.—My I know whether this was not the reason given in the dispute by the Bagalkot Cement Workers' Union ?